## ದಾನಿಗಳು ಅರ್ಜಿ ಸಲ್ಲಿಸಿದ ಬಳಿಕ ಮಾಡಬೇಕಾದ ಅಗತ್ಯ ಕರ್ತವ್ಯ

- ಮನೆಯಲ್ಲಿ ಎಲ್ಲರಿಗೂ ಕಣ್ಣುದಾನ ಮಾಡಿದ ಬಗ್ಗೆ ತಿಳಿಸಬೇಕು.
- ಅರ್ಜಿ ಸಲ್ಲಿಸಿದ ಮೇಲೆ ಈ ವಿಷಯವನ್ನು ಎಲ್ಲರೊಂದಿಗೆ ಹಂಚಿಕೊಂಡು, ‘ನಾನು ನೇತ್ರದಾನ ಮಾಡಿದ್ದೇನೆ, ನೀವೂ ಮಾಡಿ’ ಎಂದು ಒಪ್ಪಿಸಬೇಕು.
- ಯಾರದಾದರೂ ಸಾವಿನ ಮನೆಗೆ ಹೋದ ಕೂಡಲೇ ಮೊದಲು ಕಣ್ಣುಗಳ ದಾನ ಮಾಡಿ ಎಂದು ವಿನಂತಿಸಬೇಕು. ಇದು ಒಂದು ಪವಿತ್ರವಾದ ಕೆಲಸ ಎಂಬುದನ್ನು ಮನದಟ್ಟು ಮಾಡಿಕೊಡಬೇಕು.
- ವ್ಯಕ್ತಿ ಮೃತಪಟ್ಟ ಬಳಿಕ ಆರು ಗಂಟೆಗಳೊಳಗೆ ಕಣ್ಣುಗಳನ್ನು ಪಡೆಯಲು ವೈದ್ಯರು ಬರುತ್ತಾರೆ. ಹೀಗಾಗಿ ಕಣ್ಣುಗಳನ್ನು ಮುಚ್ಚಿದ ಸ್ಥಿತಿಯಲ್ಲಿ ಇಟ್ಟಿರಬೇಕು. ಇಲ್ಲದಿದ್ದರೆ ಕಣ್ಣುಗಳ ಕಾರ್ನಿಯಾಕ್ಕೆ ಹಾನಿಯಾಗುತ್ತದೆ.
- ದಾನ ಮಾಡಿದ ಕಣ್ಣುಗಳನ್ನು ಯಾರಿಗೆ ಅಳವಡಿಸಿದ್ದೇವೆ ಎಂಬುದನ್ನು ಗೌಪ್ಯವಾಗಿ ಇಡಲಾಗುತ್ತದೆ. ಹೀಗಾಗಿ ಯಾವುದೇ ಹಿಂಜರಿಕೆ ಇಲ್ಲದೆ ಕಣ್ಣುದಾನ ಮಾಡಬಹುದು.



ಬರುತ್ತದೆ. ಅದನ್ನು ತುಂಬಿ ಕಳುಹಿಸಿದರೆ ಸಾಕು. ಒಂದು ನಿಮಿಷದೊಳಗೆ ಮಾಹಿತಿ ದಾಖಲಾಗುತ್ತದೆ.

ಈ ಆನ್‌ಲೈನ್ ದಾಖಲಾತಿ ಸಂದೇಶ ನೀಡಿದ ಮೇಲೆ ಸುಮಾರು 85 ಸಾವಿರ ಜನರು ಕಣ್ಣುದಾನ ಮಾಡುವ ಪ್ರತಿಜ್ಞೆ ಮಾಡಿದ್ದಾರೆ. ಪುನೀತ್ ತೀರಿಹೋದ ಒಂದು ವರ್ಷದೊಳಗೆ ಎರಡು ಸಾವಿರ ಕಣ್ಣುಗಳು ದಾನವಾಗಿ ನಮ್ಮ ಆಸ್ಪತ್ರೆಗೆ ಬಂದಿವೆ.

ಕೊರೊನಾ ಸಮಯದಲ್ಲಿ ದಾನಿಗಳು ಬರಲೇ ಇಲ್ಲ. ನಾವೂ ದಾನ ಪಡೆಯಲು ನಿರ್ಬಂಧ ಹೇರಿದ್ದೆವು. ನಾರಾಯಣ ನೇತ್ರಾಲಯಕ್ಕೆ 2020ರಲ್ಲಿ 575 ಕಣ್ಣುಗಳು, 2021ರಲ್ಲಿ 1225 ಹಾಗೂ 2022ರಲ್ಲಿ 1798 ಕಣ್ಣುಗಳು ದಾನವಾಗಿ ಬಂದಿವೆ. ಕಣ್ಣುಗಳ ಕಾರ್ನಿಯಾ ಸಮಸ್ಯೆ ಇರುವವರು ನಮ್ಮ ರಾಜ್ಯದಲ್ಲಿ ಲಕ್ಷಗಟ್ಟಲೆ ಮಂದಿ ಇದ್ದಾರೆ. ಇವರಲ್ಲಿ ಮಕ್ಕಳೇ ಹೆಚ್ಚು. ಯಾವುದೇ ರೀತಿಯ ಕೃತಕ ಕಾರ್ನಿಯಾ ಇಲ್ಲದಿರುವ ಕಾರಣ ದಾನಿಗಳಿಂದ ಪಡೆದ ಕಾರ್ನಿಯಾವನ್ನೇ ಕಸಿ ಮಾಡಬೇಕಾಗಿದೆ.

ನಮ್ಮ ರಾಜ್ಯದಲ್ಲಿ ವರ್ಷಕ್ಕೆ ಅಂದಾಜು ಐದು ಸಾವಿರ ಕಣ್ಣುಗಳು ದಾನವಾಗಿ ಬರುತ್ತವೆ. ಇವರಲ್ಲಿ ಶೇ. 50ರಷ್ಟು ನಾರಾಯಣ ನೇತ್ರಾಲಯ ಒಂದರಲ್ಲೇ ದಾನವಾಗಿ ಸಿಗುತ್ತಿದೆ. ದೇಶದಲ್ಲಿ ವರ್ಷಕ್ಕೆ 60 ಸಾವಿರ ಕಣ್ಣುಗಳು ದಾನವಾಗಿ ಬರುತ್ತಿವೆ. ಆದರೆ ವರ್ಷಕ್ಕೆ ಒಂದು ಲಕ್ಷ ಮಂದಿಗೆ ಕಣ್ಣುಗಳ ಅವಶ್ಯಕತೆ ಇದೆ. ಈ ಬಹುದೊಡ್ಡ ಅಂತರವನ್ನು ನೀಗಿಸಬೇಕಾಗಿದೆ. ನಾವು ತೀರಿಹೋದ ಮೇಲೆ ನಮ್ಮ ಕಣ್ಣುಗಳು ಬೇರೆಯವರಿಗೆ ಬೆಳಕಾಗಿ ಬರುತ್ತವೆ ಎಂಬುದೇ ಸೌಭಾಗ್ಯ ಎಂದು ಭಾವಿಸಬೇಕು.

ನೇತ್ರದಾನವನ್ನು ಮಾಡಲು ಯಾವುದೇ ವಯೋಮಿತಿಯ ನಿರ್ಬಂಧ ಇಲ್ಲ. ಮಧುಮೇಹ, ರಕ್ತದೊತ್ತಡ ಇರುವವರು, ಕಣ್ಣು ಆಪರೇಷನ್ ಆದವರು, ಕನ್ನಡಕ ಬಳಸುತ್ತಿದ್ದವರು... ಹೀಗೆ ಯಾರು ಬೇಕಾದರೂ ಮಾಡಬಹುದು. ಸ್ವಯಂ ಇಚ್ಛೆಯಿಂದ ಮಾಡಿದರೆ ಒಳ್ಳೆಯದು. ■

ತಿಳಿಸಲಾಗುತ್ತದೆ. ಆನ್‌ಲೈನ್ ವ್ಯವಸ್ಥೆಯಿಂದ ನೋಂದಣಿ ಮಾಡಿಕೊಂಡ ವ್ಯಕ್ತಿ ಮೃತಪಟ್ಟರೆ, ಶೀಘ್ರವಾಗಿ ಆತನ ಅಂಗಾಂಗಗಳನ್ನು ಪಡೆದು, ರೋಗಿಗೆ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತದೆ. ನೆರೆಯ ತಮಿಳುನಾಡಿನಲ್ಲಿ ಈಗಾಗಲೇ ‘ಜೀವ ಸಾರ್ಥಕತೆ’ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದು, ‘ಜೀವ ಸಾರ್ಥಕತೆ’ ಯೋಜನೆ ಆರಂಭಿಸಿದ ದೇಶದ ಮೊದಲ ರಾಜ್ಯ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ಕರ್ನಾಟಕ ಎರಡನೇ ರಾಜ್ಯವಾಗಿದೆ.

### ಈ ಅಂಗಗಳನ್ನು ದಾನ ಮಾಡಿ

ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಹೃದಯ, ಕಿಡ್ನಿ, ಶ್ವಾಸಕೋಶ, ಕಣ್ಣುಗಳು, ಲಿವರ್, ಪ್ಯಾಂಕ್ರಿಯಾಸ್, ಚಿಕ್ಕ ನರಗಳು, ತ್ವಚೆಯ ನರಗಳು, ಮೂಳೆಯ ನರಗಳು, ಚರ್ಮ, ರಕ್ತನಾಳಗಳನ್ನು ದಾನ ಮಾಡಬಹುದು. ಮೆದುಳು ನಿಷ್ಕ್ರಿಯವಾದ ವ್ಯಕ್ತಿಯ ದೇಹದಾನ ಮಾಡಿದರೆ ಮುಖ್ಯವಾಗಿ ಏಳು ಜೀವಗಳನ್ನು ಉಳಿಸಬಹುದು. ಹೃದಯ, ಶ್ವಾಸಕೋಶ, ಎರಡು ಕಿಡ್ನಿಗಳು, ಪಿತ್ತಕೋಶ, ಪಿತ್ತಜನಕಾಂಗ, ಕರುಳು ಅಲ್ಲದೆ ಕಣ್ಣುಗಳನ್ನು ಇತರರಿಗೆ ಕಸಿ ಮಾಡಬಹುದು. ಒಂದು ವೇಳೆ ಹೃದಯಾಘಾತವಾಗಿದ್ದರೆ ಕಣ್ಣು ಮತ್ತು ಇತರ ಅಂಗಗಳನ್ನು ದಾನ ಮಾಡಬಹುದು.

**2022 ಅಕ್ಟೋಬರ್‌ವರೆಗೆ, ರಾಜ್ಯದಲ್ಲಿ ವಿವಿಧ ಅಂಗಗಳಿಗಾಗಿ ಹೆಸರು ನೋಂದಾಯಿಸಿಕೊಂಡಿರುವ ಆಕಾಂಕ್ಷಿಗಳು**

| | |
|---|---|
| ಮೂತ್ರಪಿಂಡ | 4,680 |
| ಯಕೃತ್ | 1,297 |
| ಹೃದಯ | 118 |
| ಶ್ವಾಸಕೋಶ | 142 |
| ಕಿಡ್ನಿ ಮತ್ತು ಲಿವರ್ | 33 |
| ಕಿಡ್ನಿ & ಮೇದೋಜೀರಕ ಗ್ರಂಥಿ | 18 |

ಅಂಗಾಂಗ ದಾನ ಮಾಡಲು ಕೆಲವರಿಗೆ ಮನಸ್ಸಿದ್ದರೂ ಸಂಪ್ರದಾಯದ ಕಾರಣದಿಂದಾಗಿ ಹಿಂಜರಿಯುವವರೂ ಇದ್ದಾರೆ. ಅಂಗಗಳನ್ನು ಪಡೆಯಲಿಕ್ಕಾಗಿ ದೇಹವನ್ನು ಛಿದ್ರಗೊಳಿಸುವುದರಿಂದ, ಆ ದೇಹ ಅಂತ್ಯಸಂಸ್ಕಾರಕ್ಕೆ ಅನರ್ಹವಾಗುತ್ತದೆ ಎಂದು ಕೆಲವರು ಭಾವಿಸುತ್ತಾರೆ. ತಮ್ಮ ಪ್ರೀತಿಪಾತ್ರರ ದೇಹ ಕೊನೆಯ ಕ್ಷಣದಲ್ಲಿ ವಿರೂಪವಾಗುವುದನ್ನು ನೋಡಲು ಕೆಲವರು ಇಷ್ಟಪಡುವುದಿಲ್ಲ. ಈ ಎಲ್ಲವೂ ಸರಿಯೇ. ಆದರೆ, ನಮ್ಮ ಇಷ್ಟಪಾತ್ರರು ಸಾವಿನ ನಂತರವೂ ಯಾವುದಾದರೂ ಒಂದು ರೂಪದಲ್ಲಿ ಮತ್ತೊಬ್ಬರ ಜೀವನದ ಮೂಲಕ ಅಸ್ತಿತ್ವ ಕಂಡುಕೊಂಡಿರುತ್ತಾರೆ, ಜೀವ ಸರಪಳಿಯ ಭಾಗವಾಗಿರುತ್ತಾರೆ ಎನ್ನುವುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು. ಸಾವಿನ ನಂತರ ಹೇಗೂ ಮಣ್ಣಾಗುವ ದೇಹ ಒಂದಷ್ಟು ಮಂದಿಗೆ ಬದುಕು ನೀಡುವುದಾದರೆ ಯಾಕೆ ಬೇಡವೆನ್ನಬೇಕು? ಅಲ್ಲದೆ, ಅಂಗಗಳನ್ನು ಪಡೆದರೂ ದೇಹ ವಿರೂಪಗೊಳ್ಳದಂತೆ ವೈದ್ಯರು ಎಚ್ಚರಿಕೆ ವಹಿಸುತ್ತಾರೆ. ಹಾಗಾಗಿ, ಯಾವುದೇ ಭಯ–ಹಿಂಜರಿಕೆಗೆ ಒಳಗಾಗದೆ ಅಂಗಾಂಗ ದಾನಕ್ಕೆ ಮುಂದಾಗಬಹುದು.

ಸತ್ತ ನಂತರ ದೇಹ ಮಣ್ಣಾಗುತ್ತದೆ. ಮಣ್ಣಾಗುವ ದೇಹವೂ ಲಕ್ಷಾಂತರ ಸೂಕ್ಷ್ಮಜೀವಿಗಳಿಗೆ ಅನ್ನವಾಗುತ್ತದೆ. ಮಣ್ಣಿನ ಫಲವತ್ತತೆಯನ್ನೂ ಹೆಚ್ಚಿಸುತ್ತದೆ. ಅಂದರೆ, ಬದುಕಿದ್ದಾಗಿಂತಲೂ ಸತ್ತ ನಂತರವೇ ಮನುಷ್ಯ ಹೆಚ್ಚು ಉಪಯುಕ್ತ! ‘ನೀನಾರಿಗಾದೆಯೋ ಎಲೆ ಮಾನವ?’ ಎನ್ನುವ ಪ್ರಶ್ನೆಗೆ ಮನುಷ್ಯನ ದೇಹವನ್ನೇ ಉತ್ತರವನ್ನಾಗಿ ನೀಡಬಹುದು.

ಅಂಗಾಂಗ ದಾನ ಮಾಡಲು ವಿವರಗಳಿಗಾಗಿ ‘ಜೀವ ಸಾರ್ಥಕತೆ’ ಕಚೇರಿಯನ್ನು ಸಂಪರ್ಕಿಸಬಹುದು. ಫೋನ್: 98450 06768, 080 – 26295636

ಪ್ರತಿಕ್ರಿಯಿಸಿ: feedback@sudha.co.in